ಈ ದಿನ ದಿನಾಂಕಃ 05.02.2025 ರಂದು ಸಾಕ್ಷಿಯನ್ನು ಇಂದು ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಂದುವರೆದ ಪಾಟೀಸವಾಲು ವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ</u>**

8. ನಮ್ಮ ಕುಟುಂಬಕ್ಕೆ ಸೇರಿದ ಸರ್ವೆ ನಂ. 94ರ ಒಟ್ಟು ವಿಸ್ತೀರ್ಣ 21 ಎಕರೆ 15 ಗುಂಟೆ. ಸದರಿ ಜಮೀನಿನ ಪೂರ್ವ ಬಾಗದಲ್ಲಿ 5 ಎಕರೆ ಜಮೀನನ್ನು ಜಯದೇವಪ್ಪ ಬಿನ್ ಬಸಣ್ಣನವರಿಗೆ ಮಾರಾಟ ಮಾಡಲಾಗಿದೆ ಎಂದರೆ ಸರಿ. ಸದರಿ ಜಮೀನಿನ ಸ್ವಾದೀನದಲ್ಲಿ ಅಶೋಕರವರಿದ್ದಾರೆ. 21 ಎಕರೆ 15 ಗುಂಟೆ ಜಮೀನಿನ ಪಶ್ಚಿಮ ಬಾಗದಲ್ಲಿ ಆಲೂರು ಹನುಮಂತಪ್ಪನವರ ಮಗ ರುದ್ರಪ್ಪನವರಿಗೆ 6 ಎಕರೆ ಜಮೀನು ಮಾರಾಟ ಮಾಡಲಾಗಿದೆ ಎಂದರೆ ಸರಿ. ಮಾರಾಟ ಮಾಡಿದ ಎರಡು ಜಮೀನುಗಳ ಮದ್ಯ ನಮ್ಮ ಕುಟುಂಬಕ್ಕೆ 10 ಎಕರೆ 26 ಗುಂಟೆ ಜಮೀನು ಉಳಿದಿತ್ತು ಎಂದರೆ ಸರಿ.

9. 10 ಎಕರೆ 26 ಗುಂಟೆ ಜಮೀನಿನ ಪೈಕಿ 5 ಎಕರೆ 36 ಗುಂಟೆ ಜಮೀನು ಸೌಬಾಗ್ಯಮ್ಮನವರಿಗೆ ಮಾರಾಟ ಮಾಡಲಾಗಿದೆ ಎಂದರೆ ಸಾಕ್ಷಿ ಸದರಿಯವರಿಗೆ 2 ಎಕರೆ ಮಾರಾಟ ಮಾಡಲಾಗಿದೆ ಎಂದು ನುಡಿಯುತ್ತಾರೆ. ಸದರಿ ಮಾರಾಟ 1973 ರಲ್ಲಾಗಿದೆ ಎಂದರೆ ಸರಿ. ಸದರಿಯವರಿಗೆ ದಿಃ 19.02.1973 ರಂದು ನೊಂದಾಯಿತ ಕ್ರಯ ಪತ್ರ ಮೂಲಕ ಆಸ್ತಿ ಮಾರಾಟ ಮಾಡಿದ್ದೇವೆ ಆದರೆ 2 ಎಕರೆ ಮಾತ್ರ ಮಾರಾಟ ಮಾಡಿದ್ದೇವೆ. ನಿಡಿ 10 ರಂತೆ ಸದರಿಯವರ ಕ್ರಯಪತ್ರವಿದ್ದು ಅದರ ಸಂಗತಿಗಳೆಲ್ಲವೂ ಸತ್ಯವಾಗಿರುತ್ತವೆ. ಸದರಿ ಸೌಬಾಗ್ಯಮ್ಮನವರು ತನ್ನ ಕ್ರಯಪತ್ರದ ಆಸ್ತಿಗಳನ್ನು 2 ಎಕರೆ 36 ಗುಂಟೆಯನ್ನು ಯಲ್ಲಮ್ಮನವರಿಗೆ, ನೇತ್ರಾವತಿಯವರಿಗೆ 3 ಎಕರೆ ಜಮೀನು ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ನಾವು ಆಕೆಗೆ 2 ಎಕರೆ ಮಾತ್ರ ಮಾರಾಟ ಮಾಡಿರುತ್ತೇವೆ ಎಂದು ಸಾಕ್ಷಿ ನುಡಿಯುತ್ತಾರೆ. ಸೌಬಾಗ್ಯಮ್ಮನವರು ಖರೀದಿಸಿದ ಸ್ವತ್ತಿನ ಸ್ವಾದೀನದಲ್ಲಿ ಪ್ರಸ್ತುತ ಇಲ್ಲ ಎಂದರೆ ಗೊತ್ತಿಲ್ಲ. ಸೌಬಾಗ್ಯಮ್ಮನವರಿಗೆ ಮಾರಾಟ ಮಾಡಿ ಉಳಿದ್ದಿದ ದಕ್ಷಿಣ ಆಸ್ತಿಯೇ ದಾವಾ ಆಸ್ತಿಯಾಗಿದೆ ಎಂದರೆ ಸರಿ.

10. ನಿಡಿ 2 ರಲ್ಲಿ ಸೌಬಾಗ್ಯಮ್ಮನವರಿಗೆ ಆಸ್ತಿಯನ್ನು ಮಾರಾಟ ಮಾಡಿದ ಹಾಗೂ ದಾವಾ ಆಸ್ತಿಯ ಕುರಿತಾದ ವ್ಯವಹರಣೆಗಳ ದಾಖಲೆಯ ಬಗ್ಗೆ ನಮೂದಾಗಿದೆ ಎಂದರೆ ನನಗೆ ಓದಲು ಬರುವುದಿಲ್ಲವೆಂದು ಸಾಕ್ಷಿ ನುಡಿಯುತ್ತಾರೆ. ನಿಡಿ 2ರಲ್ಲಿ ಉಲ್ಲೇಖಿಸಿರುವ ಪಾರ್ವತಮ್ಮ ಎಂದರೆ ವಾದಿಯ ತಾಯಿ ಮತ್ತು ಬರೆದುಕೊಟ್ಟವರ ಕಾಲಂನಲ್ಲಿರುವ ಹೆಸರು ನನ್ನದಾಗಿರುತ್ತದೆ. ದಾವಾ ಆಸ್ತಿಯನ್ನು ವಾದಿಯ ತಾಯಿ ಪಾರ್ವತಮ್ಮ 1978ರಲ್ಲಿ ಮಾರಾಟ ಮಾಡಿದ ನಂತರ ಅವರು ಸ್ವಾದೀನ ಹೊಂದಿದ್ದರು ಅವರ ಮರಣ ನಂತರ ವಾದಿ ಸ್ವಾದೀನಾನುಭವದಲ್ಲಿದ್ದಾರೆ ಎಂಬ ಸೂಚನೆಗೆ ಸಾಕ್ಷಿ ನಾವು ಮಾರಾಟ ಮಾಡಿದ್ದು 2 ಎಕರೆ ಜಮೀನನ್ನು ಮಾತ್ರ ಎಂದು ನುಡಿಯುತ್ತಾರೆ. ಕ್ರಯಪತ್ರದ ಆದಾರದಲ್ಲಿ ಸದರಿಯವರ ಹೆಸರಿಗೆ ಹಕ್ಕು ಬದಲಾವಣೆ ವಹಿ ಆಗಿ ಕಂದಾಯ ದಾಖಲೆಗಳು ಅಸ್ತಿತ್ವಕ್ಕೆ ಬಂದಿವೆ ಎಂದರೆ ಸರಿಯಲ್ಲ.

11. ವಾದಿ ಸಲ್ಲಿಸಿದ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿಲ್ಲ. ಪ್ರಸ್ತುತ ದಾವಾ ಆಸ್ತಿ ಪಹಣಿ ವಾದಿ ಹೆಸರಿಗಿದೆ ಎಂದರೆ ನನಗೆ ಗೊತ್ತಿಲ್ಲ. 2022 ರಲ್ಲಿ ನಾವು ಮತ್ತು ನಮ್ಮ ಕುಟುಂಬದವರು ಸೇರೀ ವಾದಿಯ ದಾವಾ ಆಸ್ತಿ ಸ್ವಾದೀನಾನುಭವಕ್ಕೆ ತಕರಾರು ಮಾಡಿದ್ದೇವೆ ಎಂದರೆ ಸರಿ. ಆದ್ದರಿಂದಲೇ ವಾದಿ ಪ್ರಸ್ತುತ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನಾವು ಎಂದಿಗೂ ಸ್ವಾದೀನಾನುಭವದಲ್ಲಿಲ್ಲ ಎಂದರೆ ಸರಿಯಲ್ಲ. 1978ರಿಂದಲೂ ವಾದಿ ಮತ್ತು ಅವರ ಕುಟುಂಬದವರು ದಾವಾ ಆಸ್ತಿ ಸ್ವಾದೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ.

12. ದಾವಾ ಆಸ್ತಿಯ ಖಾತೆ ಪಹಣಿಗಳನ್ನು ಸಂಬಂದಿತ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇವೆ ಆ ಕುರಿತು ದಾಖಲೆಗಳಿವೆ. 1978 ರಲ್ಲಿ ದಾವಾ ಆಸ್ತಿ ವಾದಿಯ ತಾಯಿಗೆ ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದು ಕೇವಲ 2 ಎಕರೆ ಎಂದು ಸುಳ್ಳು ಸಾಧಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಕ್ರಯಪತ್ರದ ನಂತರ ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಹಿತಾಸಕ್ತಿ ಉಳಿದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.